ಕರ್ನಾಟಕ ವಿಧಾನಸಭೆ

ಗುರುವಾರ 12ನೇ ಮಾರ್ಚ್ 1992

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚನೆ

ಉಪಾಧ್ಯಕ್ಷರು : ಮಾಜಿ ಶಾಸಕ ಶ್ರೀ ಹೆಚ್.ಬಿ. ಚಲುವಯ್ಯನವರು ಮಾರ್ಚ್ 10 ರಂದು ನಿಧನರಾದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀ ಚಲುವಯ್ಯನವರು 1983ರಲ್ಲಿ 7ನೇ ವಿಧಾನಸಭೆಗೆ ಹೆಗ್ಗಡದೇವನಕೋಟೆ ಕ್ಷೇತ್ರದಿಂದ ಆಯ್ಕೆಯಾಗಿ ಗಣನೀಯ ಸೇವೆ ಸಲ್ಲಿಸಿದ್ದರು. ತಾಲ್ಲೂಕಿನ ಹಿರಿಯ ಕಾಂಗ್ರೆ ಮುಖಂಡರಾಗಿದ್ದ ಶ್ರೀಯುತರು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅದರಲ್ಲೂ ಕೃಷಿ ಮತ್ತು ಸಹಕಾರ ಕ್ಷೇತ್ರದ ಪ್ರಗತಿಗಾಗಿ ಅವಿರತವಾಗಿ ಶ್ರಮಿಸಿರುತ್ತಾರೆ.

ನಿಧನ ಹೊಂದಿದ ಈ ಮಹನೀಯರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು)

ಉಪಾಧ್ಯಕ್ಷರು : ಮೃತ ಸದಸ್ಯರ ಕುಟುಂಬದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ನಿವೇಶನಗಳ ವಿತರಣೆ

241 (1658) ಶ್ರೀ ಕೆ. ಲಕಣ್ಣ (ರಾಜಾಜಿನಗರ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಬಿದರಹಳ್ಳಿ ಹೋಬಳಿ ಯರ್ರಪ್ಪನಹಳ್ಳಿ ಗ್ರಾಮದ ಸರ್ವ ನಂ. 21 ರಲ್ಲಿ ಸರ್ಕಾರಿ 'ಡಿ' ಗ್ರೂಪ್ ನೌಕರರ ಗೃಹ ನಿರ್ಮಾಣ ಸಂಘದವರಿಂದ ನಿವೇಶನಗಳನ್ನು ವಿಂಗಡಿಸಲು ಬೆಂಗಳೂರು ಜಿಲ್ಲಾಧಿಕಾರಿಗಳು ಅನುಮತಿ ನೀಡಿರುವುದು ನಿಜವೆ?

ಆ) ಅನುಮತಿ ನೀಡಿದ್ದರೆ ಯಾವ ವರ್ಷದಲ್ಲಿ ನೀಡಲಾಗಿದೆ ಮತ್ತು ಎಷ್ಟು ಎಕರೆಗೆ ನೀಡಲಾಗಿದೆ?